ಕೇಳುತ್ತಿದ್ದೇನೆ. ಏನಾದರೂ ಆಗಿ ಅವರ ಜೊತೆಯಲ್ಲಿ ಇನ್ನೊಬ್ಬರನ್ನು ವಿಧಾನಸೌಧಕ್ಕೆ ಕರೆದುಕೊಂಡು ಬಂದರೆ ನಮಗಂತೂ ಬಹಳ ಸಂತೋಷ.

ಶ್ರೀ ವಾಟಾಳ್ ನಾಗರಾಜ್: ನಾನೊಬ್ಬನೇ ಸಾಕು 25 ಜನ ಇದ್ದಾಹಾಗೆ ಇನ್ನೊಬ್ಬರನ್ನು ಏತಕ್ಕೆ ಕರೆದುಕೊಂಡು ಬರಬೇಕು.

ಶ್ರೀ ಬಿ.ಎಂ. ಇದಿನಬ್ಬ: ವಾಟಾಳ್ ನಾಗರಾಜ್‌ರವರು ಬರೀ ಫೋಟೋ ಮಾತ್ರ ಅಪೇಕ್ಷೆ ಮಾಡುತ್ತೀರಿ. ಜೀವಂತ ಜನರ ಜೀವಂತಿಕೆಯನ್ನು ನೀವು ಮೆಚ್ಚಬೇಕು. ಫೋಟೋ ಏತಕ್ಕೆ ಬೇಕು?

ಶ್ರೀ ಎಂ. ವಿ. ವೆಂಕಟಪ್ಪ: ಇದೆಲ್ಲಕಿಂತ ಬದಲಾಗಿ " who is who" ಮಾಡಿದರೆ ಎಲ್ಲರ ಫೋಟೋಗಳನ್ನು ಅದರಲ್ಲಿ ನೋಡಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್: ನಿಮಗೆ ನಾವು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈ ಸಭೆಯಲ್ಲಿ ತಾವು ಇರಬೇಕು. ತಾವು ನಮ್ಮ ಅಧ್ಯಕ್ಷರಾಗಿ ಇರಬೇಕೆಂಬುದು ನಮಗೆಲ್ಲರಿಗೂ ಆಸೆ ಅಭೀಮಾನ ಇದೆ. ತಾವು ದೆಹಲಿಗೆ ಹೋಗುತ್ತೀರಿ ಎನ್ನತಕ್ಕಂಥ ಭಾವನೆ ನನಗೆ ಬಂದಿಲ್ಲ. ನಾನಂತೂ ಅತ್ಯಂತ ಪ್ರೀತಿ ವಿಶ್ವಾಸದಿಂದ ಸದನದಲ್ಲಿ ತಾವು ಅಧ್ಯಕ್ಷರಾಗಿ ಇರಬೇಕು ಇನ್ನು ಉನ್ನತವಾದ ಸ್ಥಾನಕ್ಕೆ ಹೋಗಬೇಕು ಎಂದು ಬಯಸಕ್ಕಂತಹವನು. ಅದನ್ನು ನಾವು ಅಪೇಕ್ಷೆ ಮಾಡುತ್ತೇವೆ.

ಅಧ್ಯಕ್ಷರು: ಈಗ ಸಭೆಯು ಮುಂದುವರಿದು ಮತ್ತೆ 2-20ಕ್ಕೆ ಸಮಾವೇಶ ಗೊಳ್ಳುತ್ತದೆ.

(ಸದನವು 1-17ಗಂಟೆಗೆ ಮುಕ್ತಾಯಗೊಂಡು ಪುನಃ 2-20ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

ಸದನವು 2 ಗಂಟೆ 30 ನಿಮಿಷಕ್ಕೆ ಪುನಃ ಸೇರಿತು

(ಉಪಾಧ್ಯಕ್ಷರಾದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ನಿಯಮ 334ರ ಮೇರೆಗೆ

1) ಇಂಡಿ ತಾಲ್ಲೂಕಿನ ನಿಂಬಾಳ ಗ್ರಾಮದ ಕೆರೆಗೆ ಅನುದಾನ ಬಿಡುಗಡೆ.

ಶ್ರೀ ಮನೋಹರ್ ಐನಾಪುರ (ಬಳ್ಳೋಳಿ) : ಬೆಳಿಗೆ ಮಾನ್ಯ ಉಪಾಧ್ಯಕ್ಷಿಣಿಯವರೇ ಇಂಡಿ ತಾಲ್ಲೂಕಿನ ನಿಂಬಾಳ ಗ್ರಾಮದ ಕೆರೆಗೆ ಮೂರನೇ ಒಂದರಷ್ಟು ಅನುದಾನವನ್ನು ಬಿಡುಗಡೆ ಮಾಡಲು 1990-91ರ ಅಧಿವೇಶನದಲ್ಲಿ ಪ್ರಸ್ತಾಪ ಮಾಡಲಾಗಿ, ಅನುಧಾನ ಬಿಡುಗಡೆ ಮಾಡಲಾಗುವುದೆಂದು ಆಗಿನ ಮಾನ್ಯ ಲೋಕೋಪಯೋಗಿ ಸಚಿವರು ಭರವಸೆ ನೀಡಿದ್ದರು. ಆದರೆ ಈವರೆಗೆ ಏನೂ ತಿಳಿಯಲಿಲ್ಲ. ಈಗಲಾದರೂ ಈ ವರ್ಷದ ಆಯವ್ಯಯದಲ್ಲಿ ಮೂರನೆ ಒಂದರಷ್ಟು ಹಣ ಬಿಡುಗಡೆ ಮಾಡಲಾಗಿದ್ದೆಯೇ? ಮಾಡಿರದಿದ್ದರೆ ಈ ತಿಂಗಳಲ್ಲೇ ಹಣ ಬಿಡುಗಡೆ ಮಾಡಲಿಕ್ಕೆ ಯಾವ ಕ್ರಮವನ್ನು ಮಾನ್ಯ ಸಚಿವರು ತೆಗೆದುಕೊಳ್ಳುವರು ಎಂಬುದನ್ನು ತಿಳಿಸುವರೇ?

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣಾ ಹಾಗೂ ವ್ಯವಾರಗಳ ಸಚಿವರು): ಮಾನ್ಯ ಶಾಸಕರು ಎತ್ತಿದಂಥ ಪ್ರಶ್ನೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.